**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-244/2023**

ಪಿ.ಡಬ್ಲ್ಯೂಃ- 2
ಸಿ.ಡಬ್ಲ್ಯೂಃ- 1

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಕಾವ್ಯ |
| ಗಂಡನ ಹೆಸರುಃ | : | ಜಗದೀಶ್ |
| ವಯಸ್ಸುಃ | : | 32 ವರ್ಷ |
| ವೃತ್ತಿಃ | : | ಮನೆಗೆಲಸ |
| ವಾಸಃ | : | ಯಶವಂತಪುರ, ಬೆಂಗಳೂರು. |

**ದಿನಾಂಕಃ 03-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಆರೋಪಿ ನನ್ನ 2ನೇ ಗಂಡ. ಚಾಸಾ-2 ರಿಂದ 4 ರವರ ಪರಿಚಯ ಇದೆ. ಆರೋಪಿಯ ಮನೆ ನಾನು ಹಾಗೂ ನನ್ನ ಮೊದಲನೆ ಗಂಡ ವಾಸವಿದ್ದ ಹೊಳೇನರಸೀಪುರದಲ್ಲಿರುವ ನಮ್ಮ ಮನೆಯ ಮುಂದೆ ಇತ್ತು. ನನ್ನ ಮತ್ತು ಆರೋಪಿ ನಡುವೆ ಯಾವುದೇ ರೀತಿಯ ದೈಹಿಕ ಸಂಪರ್ಕ ಇರಲಿಲ್ಲ ಹಾಗೂ ಆರೋಪಿಯಿಂದ ನಾನು ಎಂದಿಗೂ ಗರ್ಭಧಾರಣೆ ಆಗಿರುವುದಿಲ್ಲ ಹಾಗೂ ಆರೋಪಿಯ ಮಾತಿಗೆ ಮಣಿದು ಗರ್ಭಪಾತ ಮಾಡಿಸಿಕೊಂಡಿರುವುದಿಲ್ಲ. ಆರೋಪಿ ಎಂದಿಗೂ ನನ್ನ ಗಂಡ ಸೈಯದ್ ನಿಂದ ವಿಚ್ಛೇದನ ಪಡೆಯುವಂತೆ ಬಲವಂತ ಮಾಡಿರುವುದಿಲ್ಲ ಹಾಗೂ ನಾನು ಮತ್ತೆ ಹಿಂದೂ ಧರ್ಮಕ್ಕೆ ಮತಾಂತರ ಹೊಂದಿ ನನ್ನ

ಹೆಸರನ್ನು ಕಾವ್ಯ ಎಂದು ಬದಲಾಯಿಸಿಕೊಂಡಿರುವುದಿಲ್ಲ. ಆರೋಪಿಯಿಂದ ನನಗೆ ಯಾವುದೇ ತೊಂದರೆ ಆಗಿರುವುದಿಲ್ಲ, ಬದಲಾಗಿ ಆರೋಪಿ ಮತ್ತು ನನ್ನ ನಡುವೆ ಮನೆಯ ವಿಚಾರವಾಗಿ ಬಾಯಿ ಮಾತು ಜಗಳವಾಗಿದ್ದು ಠಾಣೆಗೆ ಹೋದಾಗ ಪೊಲೀಸರು ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ ಕಾರಣ ನನಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ನನ್ನನ್ನು ಪೊಲೀಸರು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಪೊಲೀಸರು ಹೇಳಿಕೊಟ್ಟಂತೆ ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ್ದೇನೆ. ಸಾಕ್ಷಿ ದೂರು ಹಾಗೂ ಮೂರು ಸ್ಥಳ ಪಂಚನಾಮೆಗಳನ್ನು ಮತ್ತು ಅವುಗಳ ಮೇಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ದಿ:27.07.2021 ಕ್ಕೆ ಸಂಬಂಧಿಸಿದ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-1ಕ್ಕೆ ಗುರುತಿಸಿದ್ದು, ದೂರನ್ನು ಹಾಗೂ ದಿ:01.07.2021, 27.07.2021ರ ಸ್ಥಳ ಪಂಚನಾಮೆಗಳನ್ನು ನಿಪಿ-5 ರಿಂದ 7ಕ್ಕೆ ಕ್ರಮವಾಗಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-1(ಬಿ), 5(ಎ) ರಿಂದ 7(ಎ) ಗೆ ಕ್ರಮವಾಗಿ ಗುರುತಿಸಲಾಯಿತು. ಪೊಲೀಸರು ನನ್ನನ್ನು ಹಾಗೂ ಮನೆಯ ಮಾಲೀಕರನ್ನು ನಿಲ್ಲಿಸಿ ಪೋಟೋಗಳನ್ನು ತೆಗೆದಿದ್ದು, ಯಾವ ಕಾರಣಕ್ಕಾಗಿ ಫೋಟೋಗಳನ್ನು ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ, ಸದರಿ ಫೋಟೋಗಳನ್ನು ಸಾಕ್ಷಿ ಗುರುತಿಸಲು ನಿರಾಕರಿಸಿದ್ದು ಅವುಗಳನ್ನು ಈಗಾಗಲೇ ನಿಪಿ-2 ಹಾಗೂ 3ಕ್ಕೆ ಗುರುತಿಸಲಾಗಿದೆ. ದಿ:17.07.2021 ರಂದು ನ್ಯಾಯಾಲಯದ ಮುಂದೆ ನೀಡಿದ ಹೇಳಿಕೆಯಲ್ಲಿ ಏನು ಬರೆಯಲಾಗಿದೆ ಎಂದು ನೆನಪಿರುವುದಿಲ್ಲ. ಸದರಿ ಹೇಳಿಕೆಯನ್ನು ನಿಪಿ-8ಕ್ಕೆ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-8(ಎ)ಗೆ ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ

ಮುಂದುವರಿದ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. ನನ್ನ ಮದುವೆ ಸೈಯದ್ ಹತೀಕ್ ಎಂಬುವರೊಂದಿಗೆ ಹೊಳೇನರಸೀಪುರದಲ್ಲಿ ಆಗಿದ್ದು, ಬಳಿಕ ನಾನು ಮತ್ತು ನನ್ನ ಸದರಿ ಗಂಡ ಹೊಳೇನರಸೀಪುರದಲ್ಲಿ ವಾಸವಿದ್ದೆವು ಎಂದರೆ ಸರಿ. ನಮ್ಮ ಮನೆಯ ಬಳಿ ಆರೋಪಿ ವಾಸವಿದ್ದು ಆತನು ತನ್ನೊಂದಿಗೆ ಪ್ರೀತಿಸುವಂತೆ ನಟಿಸಿ, ನನ್ನ ಗಂಡ ಹತೀಕ್ ನಿಂದ ವಿಚ್ಚೇದನ ಪಡೆಯುವಂತೆ ಮಾಡಿ ನಂತರ ನನ್ನ ಹೆಸರನ್ನು ಕಾವ್ಯ ಎಂದು ಬದಲಾಯಿಸಿಕೊಳ್ಳುವಂತೆ ಮಾಡಿ ಬಳಿಕ ನನ್ನನ್ನು ಮದುವೆಯಾಗುತ್ತೇನೆ ಎಂದು ನಂಬಿಸಿ ಹೊಳೇನರಸೀಪುರದ ಚಿಟ್ಟನಹಳ್ಳಿಯಲ್ಲಿರುವ ಚಾಸಾ-2 ರವರ ಮನೆಯಲ್ಲಿ ಬಾಡಿಗೆಗೆ ನಾನು ಮತ್ತು ಆರೋಪಿ ವಾಸವಿದ್ದೆವು ಎಂದು ಸೂಚಿಸುವುದು ಸರಿಯಲ್ಲ. ತದನಂತರ ನಾನು ಮತ್ತು ಆರೋಪಿ ಅರಕಲಗೂಡು ಪಟ್ಟಣದ ವಿನಾಯಕ ನಗರದಲ್ಲಿರುವ ಚಾಸಾ-4 ರವರ ಮನೆಯಲ್ಲಿ ಒಂದು ವರ್ಷ ವಾಸವಿದ್ದು ಹಾಗೂ ಹಾಸನದ ಆಡುವಳ್ಳಿಯ ಚಾಸಾ-3 ರವರ ಮನೆಯಲ್ಲಿ ಸಹ ಎರಡು ವರ್ಷ ಬಾಡಿಗೆಗೆ ವಾಸವಿದ್ದು, ಆ ರೀತಿ ನಾವು ವಾಸ ಇರುವಾಗ ಆರೋಪಿಯು ನನ್ನನ್ನು ಅಕ್ರಮ ಬಂಧನದಲ್ಲಿಟ್ಟು, ನನ್ನ ಬಳಿ ಇದ್ದ 4 ಲಕ್ಷ ರೂ. ಹಣ ಹಾಗೂ 50 ಗ್ರಾಂ ಚಿನ್ನವನ್ನು ಪಡೆದು ಹಿಂದಿರುಗಿಸದೆ ಮೋಸ ಮಾಡಿ ಬಳಿಕ ನಾವು ಇಬ್ಬರೂ ಬಾಡಿಗೆ ಮನೆಯಲ್ಲಿ ವಾಸವಿದ್ದಾಗ ನನ್ನನ್ನು ನಂಬಿಸಿ ನನ್ನ ಇಚ್ಚೆಗೆ ವಿರುದ್ಧವಾಗಿ ಬಲವಂತ ಸಂಭೋಗ ನಡೆಸಿ ಎರಡು ಬಾರಿ ಗರ್ಭವತಿಯಾಗುವಂತೆ ಮಾಡಿ ನಂತರ

ಗರ್ಭವನ್ನು ತೆಗೆಸದಿದ್ದರೆ ಕೊಲೆ ಮಾಡುತ್ತೇನೆಂದು ಬೆದರಿಕೆ ಹಾಕಿ ಹಾಗೂ ವಿವಾಹ ಮಾಡಿಕೊಳ್ಳದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾನೆ ಎಂದು ಸೂಚಿಸುವುದು ಸರಿಯಲ್ಲ. ನಾನು ಅದರಂತೆ ದಿಃ30.06.2021 ರಂದು ನಿಪಿ-5 ರಂತೆ ದೂರನ್ನು ನೀಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

3. ನಾನು ದೂರು ನೀಡಿದ ಬಳಿಕ ಪೊಲೀಸರು ದಿಃ01.07.2021 ರಂದು ಸಂಜೆ 4.30 ರಿಂದ 5.15 ರವರೆಗೆ ನಾನು ತೋರಿಸಿದ ಸ್ಥಳದಲ್ಲಿ ನಿಪಿ-6 ರಂತೆ ನನ್ನ ಹಾಗೂ ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ನಮ್ಮ ಸಹಿ ಪಡೆದರು ಎಂದು ಸೂಚಿಸುವುದು ಸರಿಯಲ್ಲ. ಬಳಿಕ ದಿಃ27.07.2021 ರಂದು ಬೆಳಿಗ್ಗೆ 10.15 ರಿಂದ 11 ಗಂಟೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ನಿಪಿ-1 ರಂತೆ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ನಮ್ಮ ಸಹಿ ಪಡೆದರು ಹಾಗೂ ನಿಪಿ-2 ಮತ್ತು 3 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಬಳಿಕ ದಿಃ27.07.2021 ರಂದು ಮಧ್ಯಾಹ್ನ 2 ರಿಂದ 2.45 ಗಂಟೆಯವರೆಗೆ ನಾನು ತೋರಿಸಿದ ಸ್ಥಳದಲ್ಲಿ ನಿಪಿ-7 ರಂತೆ ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ನಮ್ಮ ಸಹಿ ಪಡೆದರು ಎಂದು ಸೂಚಿಸುವುದು ಸರಿಯಲ್ಲ. ದಿಃ17.07.2021 ರಂದು ಅರಕಲಗೂಡು ನ್ಯಾಯಾಲಯದ ಮುಂದೆ ಪೊಲೀಸರು ನನ್ನನ್ನು ಹಾಜರುಪಡಿಸಿದ್ದು ಆ ಸಮಯದಲ್ಲಿ ಕೃತ್ಯಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂಬ ಸೂಚನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ದಿಃ18.07.2021 ರಂದು ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಯವರ ಮುಂದೆ ನನ್ನ ವಿವರವಾದ ಮುಂದುವರಿದ ಹೇಳಿಕೆಯನ್ನು ದೂರಿಗೆ ಅನುಗುಣವಾಗಿ ನೀಡಿರುತ್ತೇನೆ

ಎಂದು ಸೂಚಿಸುವುದು ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ–9ಕ್ಕೆ ಗುರುತಿಸಲಾಯಿತು. ನಿಪಿ–1 ರಿಂದ 9 ರಂತೆ ದೂರನ್ನು ನೀಡಿದ್ದರೂ, ನನ್ನ ಸಮಕ್ಷಮ ಪಂಚನಾಮೆಗಳನ್ನು ಜರುಗಿಸಿ ಫೋಟೋಗಳನ್ನು ತೆಗೆದಿದ್ದರು, ನ್ಯಾಯಾಲಯದ ಮುಂದೆ ಹೇಳಿಕೆಯನ್ನು ಹಾಗೂ ತನಿಖಾಧಿಕಾರಿಯ ಮುಂದೆ ಮುಂದುವರಿದ ಹೇಳಿಕೆಯನ್ನು ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಸ್ ವೈ ವಕೀಲರಿಂದಃ**

ಪಾಟಿ ಸವಾಲು ಇಲ್ಲ ಎಂದು ಹೇಳುತ್ತಾರೆ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.